# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/335/2019–20

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 20/4/21

## ಕಛೇರಿ ಆದೇಶ

ವಿಷಯ: ವಿದ್ಯುತ್ ಚಿತಾಗಾರಗಳಿಗೆ ನೋಡಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್–19 ಸೋಂಕು ಹರಡುವಿಕೆ ಉಲ್ಬಣವಾಗಿದ್ದು, ನಿಯಂತ್ರಣ ಕಾರ್ಯ ಅತ್ಯವಶ್ಯಕವಾಗಿರುವುದರಿಂದ ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆವನ್ನು ಪರಿಣಾಮಕಾರಿಯಾಗಿ ಮಾಡುವ ದಿಸೆಯಲ್ಲಿ ಪಾಲಿಕೆಯು ಈಗಾಗಲೇ ಹಲವಾರು ರೀತಿಯ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಕೋವಿಡ್–19 ಸೋಂಕಿನಿಂದ ನಿಧನ ಹೊಂದುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದ್ದು, ಕೋವಿಡ್–19 ಸೋಂಕಿನಿಂದ ನಿಧನ ಹೊಂದಿರುವವರ ಮೃತದೇಹಗಳ ಅಂತ್ಯಕ್ರಿಯೆಗೆ ಈ ಕೆಳಕಂಡ ವಿದ್ಯುತ್ ಚಿತಾಗಾರಗಳನ್ನು ಕಾಯ್ದಿರಿಸಲಾಗಿರುತ್ತದೆ.

| ಕ್ರ.ಸಂ. | ವಲಯದ ಹೆಸರು | ವಿದ್ಯುತ್ ಚಿತಾಗಾರದ ಹೆಸರು |
|---|---|---|
| 1. | ಯಲಹಂಕ | ಮೇಡಿ ಅಗ್ರಹಾರ ವಿದ್ಯುತ್ ಚಿತಾಗಾರ |
| 2. | ಬೊಮ್ಮನಹಳ್ಳಿ | ಕೂಡ್ಲು ವಿದ್ಯುತ್ ಚಿತಾಗಾರ |
| 3. | ಮಹದೇವಪುರ | ಪಣತೂರು ವಿದ್ಯುತ್ ಚಿತಾಗಾರ |
| 4. | ರಾಜರಾಜೇಶ್ವರಿನಗರ | ಕೆಂಗೇರಿ ವಿದ್ಯುತ್ ಚಿತಾಗಾರ |
| 5. | ರಾಜರಾಜೇಶ್ವರಿನಗರ | ಸುಮ್ಮನಹಳ್ಳಿ ವಿದ್ಯುತ್ ಚಿತಾಗಾರ |
| 6. | ದಾಸರಹಳ್ಳಿ | ಪೀಣ್ಯ ವಿದ್ಯುತ್ ಚಿತಾಗಾರ |
| 7. | ದಕ್ಷಿಣ | ಬನಶಂಕರಿ ವಿದ್ಯುತ್ ಚಿತಾಗಾರ |

ಸದರಿ ವಿದ್ಯುತ್ ಚಿತಾಗಾರಗಳಿರುವ ಪ್ರದೇಶ / ವಲಯದಲ್ಲಿ ವಾಸವಾಗಿರುವ ಗ್ರೂಫ್ 'ಎ' ಅಥವಾ 'ಬಿ' ವೃಂದದ ಅಧಿಕಾರಿಯೊಬ್ಬರನ್ನು ಪ್ರತಿ ವಿದ್ಯುತ್ ಚಿತಾಗಾರಕ್ಕೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ಎಲ್ಲಾ ವಲಯಗಳ ಜಂಟಿ ಆಯುಕ್ತರುಗಳಿಗೆ ಸೂಚಿಸಿದೆ.

ಜಂಟಿ ಆಯುಕ್ತರುಗಳು ನೇಮಿಸುವಂತಹ ನೋಡಲ್ ಅಧಿಕಾರಿಗಳು ಈ ಕೆಳಕಂಡ ಅಂಶಗಳ ಬಗ್ಗೆ ಪ್ರತಿ ದಿನ ಮೇಲಾಧಿಕಾರಿಗಳಿಗೆ / ಕೇಂದ್ರ ಕಛೇರಿಗೆ ವರದಿಯನ್ನು ಸಲ್ಲಿಸಲು ಸೂಚಿಸಿದೆ.

1. ವಿದ್ಯುತ್ ಚಿತಾಗಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾಸ್ಕ್, ಸ್ಯಾನಿಟೈಜರ್, ಪಿಪಿಇ ಕಿಟ್‌ಗಳು ಮತ್ತು ಇನ್ನಿತರೇ ಅವಶ್ಯಕ ಸಲಕರಣೆಗಳ ಇರುವ ಬಗ್ಗೆ ಪರಿಶೀಲಿಸಿಕೊಂಡು, ಅವಶ್ಯಕ ಸಲಕರಣೆಗಳು ಇಲ್ಲದಿದ್ದಲ್ಲಿ ಸಂಬಂಧಪಟ್ಟ ಇಲಾಖೆ / ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು, ಅವಶ್ಯಕ ಸಲಕರಣೆಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
2. ವಿದ್ಯುತ್ ಚಿತಾಗಾರಕ್ಕೆ ಬರುವ ಮೃತದೇಹಗಳ ವಿವರಗಳು.
3. ವಿದ್ಯುತ್ ಚಿತಾಗಾರಕ್ಕೆ ಬರುವ ಮೃತದೇಹಗಳನ್ನು ಕಡ್ಡಾಯವಾಗಿ ಕೋವಿಡ್–19 ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ ಅಂತ್ಯಕ್ರಿಯೆ ಮಾಡುವ ಬಗ್ಗೆ ನಿರ್ದೇಶನ ನೀಡುವುದು.

4. ವಿದ್ಯುತ್ ಚಿತಾಗಾರಕ್ಕೆ ಬರುವ ಮೃತದೇಹಗಳನ್ನು ಸರದಿ ಆಧಾರದ ಮೇಲೆ ಅಂತ್ಯಕ್ರಿಯೆ ಮಾಡಲು ಅವಕಾಶ ಕಲ್ಪಿಸುವುದು.
5. ಸದರಿ ಮೃತದೇಹಗಳನ್ನು ಯಾವುದೇ ರೀತಿಯ ಜನ ಸಂದಣಿಯಾಗದಂತೆ, ಪರಸ್ಪರ ದೂರವನ್ನು / ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಅಂತ್ಯಕ್ರಿಯೆ ಮಾಡುತ್ತಿರುವ ಬಗ್ಗೆ ವರದಿಯನ್ನು ಸಲ್ಲಿಸುವುದು.

ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ / ಯೋಜನೆ / ಕಂದಾಯ / ಹಣಕಾಸು / ಕಲ್ಯಾಣ / ಆಸ್ತಿ, ಶಿಕ್ಷಣ ಮಾರುಕಟ್ಟೆ / ಆರೋಗ್ಯ & ಮಾಹಿತಿ ತಂತ್ರಜ್ಞಾನ / ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯಗಳ ವಿಶೇಷ ಆಯುಕ್ತರುಗಳಿಗೆ ಕಳುಹಿಸಿದೆ.
: ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.